1	2	3	4
9	ಮೂಡುಕೋಡಿ	155	256
10	ಕುಕ್ಕೇಡಿ	250	238
11	ನಿಟ್ಟಡೆ	202	268
12	ಅಂಡಿಂಜೆ	196	304
13	ಸೌಮ್ಯ	86	131
14	ಕೊಕ್ರಾಡಿ	168	131
15	ಸುಳ್ಕೇರಿ	94	145
16	ಮರೋಡಿ	290	172
17	ಪೆರಾಡಿ	136	117
18	ನಾರಾವಿ	318	371
19	ಕುತ್ಲೂರು	132	136
20	ಸುರ್ಕೇರಿಮೊಗ್ರು	94	151
21	ಕರಂಬಾರಯ್ಯ	217	198
22	ಶಿರ್ಲಾಲು	256	352
23	ಬಡಗಕಾರಂದೂರು	123	205
24	ಪಿಲ್ಯ	95	189
25	ಕುದ್ಯಾಡಿ	76	101
26	ನಾವರ	100	135
27	ತೆಂಕಕಾರಂದೂರು	152	250
28	ಬಳಂಜ	165	297
29	ನಾಲ್ಕೂರು	160	230
	ಒಟ್ಟು	4962	6672
	ಮೂರು ಹೋಬಳಿಗಳ ಒಟ್ಟು	23970	27030

ರಾಜ್ಯದ ಬರಗಾಲ ಪರಿಸ್ಥಿತಿ ಬಗ್ಗೆ

2501 (3014) : ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 20 ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಬಾರಿ ಬರಗಾಲ ಬಂದಿದೆ; ಕಳೆದ ಮೂರು ವರ್ಷದಿಂದ ಇದಕ್ಕಾಗಿ ಕೇಂದ್ರದಿಂದ ಬಿಡುಗಡೆ ಮಾಡಿದ ಹಣ ಎಷ್ಟು; ಹಾಗೂ ಬಿಡುಗಡೆ ಮಾಡಿದ ಆಹಾರ ಧಾನ್ಯವೆಷ್ಟು; ವರ್ಷವಾರು 3 ವರ್ಷಗಳ ವಿವರ ನೀಡುವುದು;

ಆ) 2002ನೇ ಸಾಲಿನಿಂದ ಇಲ್ಲಿಯವರೆಗೂ ರಾಜ್ಯವು ಬಿಡುಗಡೆ ಮಾಡಿದ ಆಹಾರ ಧಾನ್ಯವೆಷ್ಟು;

ಇ) ಕೇಂದ್ರ ಹಾಗೂ ರಾಜ್ಯದಿಂದ ಬಿಡುಗಡೆ ಮಾಡಿದ ಹಣದಲ್ಲಿ ಹಾಗೂ ಆಹಾರ ಧಾನ್ಯದಲ್ಲಿ ಇದುವರೆಗೂ ರಾಜ್ಯದಲ್ಲಿ ಬಿಡುಗಡೆ ಮಾಡಿದ, ಖರ್ಚು ಮಾಡಿದ ಹಣವೆಷ್ಟು; ವಿತರಣೆ ಮಾಡಿದ ಆಹಾರ ಧಾನ್ಯವೆಷ್ಟು; ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಕಳೆದ 20 ವರ್ಷಗಳಲ್ಲಿ 1985,1987,2001,2002 & 2003 ರಲ್ಲಿ ಬರಗಾಲ ಬಂದಿದೆ. ಕಳೆದ 3 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಮತ್ತು ಆಹಾರಧಾನ್ಯ ಈ ಕೆಳಕಂಡತಿದೆ.

ವರ್ಷ	ಅನುದಾನ ರೂ(ಲಕ್ಷಗಳಲ್ಲಿ)	ಆಹಾರಧಾನ್ಯ (ಮೆ.ಟನ್ ಗಳಲ್ಲಿ)
2000–2001	5593.00	--
2001–2002	5872.00	1.00.000
2002–2003	25854.00	5,30,000]

ಆ) 2002ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 6.65 ಲಕ್ಷ ಮೆ. ಟನ್ ಆಹಾರಧಾನ್ಯ ಬಿಡುಗಡೆ ಮಾಡಿದೆ. ಇನ್ನುಳಿದ 55,000 ಮೆ.ಟನ್ ಆಹಾರಧಾನ್ಯ ಬಿಡುಗಡೆ ಮಾಡಲಾಗುತ್ತಿದೆ.

ಇ) 2002–2003ನೇ ಸಾಲಿನಲ್ಲಿ ಕೇಂದ್ರದಿಂದ ಬಂದ ಹಣ ಮತ್ತು ರಾಜ್ಯದ ಪಾಲು ಸೇರಿ ರೂ.192.31 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

ಅದರಲ್ಲಿ ವೆಚ್ಚವಾದ ಹಣ ರೂ.139.36 ಕೋಟಿ. ಕೇಂದ್ರದಿಂದ ಬಿಡುಗಡೆ ಮಾಡಿರುವ ಎಲ್ಲಾ ಆಹಾರಧಾನ್ಯ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ತಾಲ್ಲೂಕುವಾರು ಆಹಾರಧಾನ್ಯ ಬಿಡುಗಡೆಯಾಗಿರುವುದಿಲ್ಲ.

ಉಡುಪಿ ಜಿಲ್ಲೆಗೆ ಪ್ರಕೃತಿ ವಿಕೋಪ ನಿಧಿ ಮಾಡುವ ಬಗ್ಗೆ

2505 (3161) : ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಕೃತಿ ವಿಕೋಪ ನಿಧಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಿಗೆ 2002–03, 2003–04ರ ಸಾಲಿನಲ್ಲಿ ಬಿಡುಗಡೆಯಾದ ಹಣದ ಜಿಲ್ಲಾವಾರು ವಿವರಗಳನ್ನು ನೀಡುವುದು;

ಆ) ಮೇಲ್ಕಂಡ ಸಾಲುಗಳಲ್ಲಿ ಉಡುಪಿ ಜಿಲ್ಲೆಗೆ ಪ್ರಕೃತಿ ವಿಕೋಪ ನಿಧಿಯಿಂದ ಬಿಡುಗಡೆಯಾದ ಹಣದಿಂದ ಕೈಗೊಂಡಿರುವ ಕಾಮಗಾರಿಗಳಾವುವು; ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು;

ಇ) ಇವುಗಳಲ್ಲಿ ಪೂರ್ತಿಗೊಂಡ ಕಾಮಗಾರಿಗಳ ವಿವರ ನೀಡುವುದು?

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಪ್ರಕೃತಿ ವಿಕೋಪ ನಿಧಿಯಡಿ ಎನ್.ಸಿ.ಸಿ.ಎಫ್‌ಯಡಿಯಲ್ಲಿ ಕೆಳಗಿನಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

2002–03 – ರೂ.192.31 ಕೋಟಿಗಳು.

2003–04 – ರೂ.106.40 ಕೋಟಿಗಳು.

ಜಿಲ್ಲಾವಾರು ವಿವರ ಅನುಬಂಧ I ರಲ್ಲಿ ಲಗತ್ತಿಸಿದೆ.

ಆ) ಉಡುಪಿ ಜಿಲ್ಲೆಗೆ ಕೆಳಗಿನಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

2002–03 – ರೂ.102.00 ಲಕ್ಷ

2003–04 – ರೂ.35.00 ಲಕ್ಷ

ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡಿರುವುದಿಲ್ಲ.